ಕೊಳೆತ ಗ್ರಾಮಗಳನ್ನು ಎಚ್ಚರಿಸಿವೆ. ಈ ನಡುವೆ ಸಂಕರಗೊಳ್ಳುತ್ತಿರುವ ಗ್ರಾಮ ಜಗತ್ತಿನ ಸಂಗಡವೇ ಅನುಭವ ಮತ್ತು ಭಾಷಿಕತನಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳುವ ತುರ್ತು ಎಂದಿಗಿಂತ ಇಂದು ಜಾಸ್ತಿಯಿದೆ. ಈ ದಾರಿಯಲ್ಲಿ ವೈಚಾರಿಕ ಆಕೃತಿಗಳು ಒತ್ತರಿಸಿ ಒಳನುಗ್ಗಿದರೂ, ಕಥೆಗಾರನಿಗೆ ಮುಖ್ಯವಾಗುವುದು ಅನುಭವಲೋಕವೇ. ಅನುಭವ ಕೃತಕಗೊಂಡರೆ ಅಥವಾ ಭ್ರಷ್ಟಗೊಂಡರೆ ಭಾಷಿಕ ಆಕೃತಿಯೂ ತಲೆತಗ್ಗಿಸಬೇಕಾಗುತ್ತದೆ. ಕಥೆಯನ್ನು ಕಟ್ಟುವ ವ್ಯಕ್ತಿಗೆ ಈ ಹಾದಿಯಲ್ಲಿ ಬದುಕಿನ ಸ್ಥಿತಿ, ಮುಗ್ಧತೆ ತುಂಬಿದ ಲೋಕ ಪ್ರಧಾನವಾಗಬೇಕು. ಗುರುಪ್ರಸಾದ್ ಕಂಟಲಗೆರೆ ಮತ್ತು ಇನ್ನಿತರರ ಕೆಲ ಕಥೆಗಳನ್ನು ಈ ಚೌಕಟ್ಟಿನಲ್ಲಿ ಗ್ರಹಿಸಬಹುದು. ಜಾತಿ ಮತ್ತು ಬದುಕು ನಮ್ಮ ಸಮಾಜವನ್ನು ಇನ್ನಿಲ್ಲದಂತೆ ಆವರಿಸಿದೆ. ಕಥೆಗಾರ ಇವೆರಡನ್ನೂ 'ಇಂದು' ಕಾಣುತ್ತಿರುವ ಬಗೆಯಲ್ಲಿ ಭಿನ್ನತೆಗಳಿವೆ. ಗುರುಪ್ರಸಾದ್‌ರ ಆರಂಭದ ಕಥೆಗಳು ಭಾಷೆಯನ್ನು ಗಟ್ಟಿಯಾಗಿ ದುಡಿಸಿಕೊಳ್ಳುತ್ತವೆ. 'ಮುಟ್ಟು', 'ನೀಲಿ ಮಗಳು', 'ಬುಡ್ಡಿದೀಪ' ಇತ್ಯಾದಿ ಕಥೆಗಳ ನಿರೂಪಣೆ ಸರಾಗವಾಗಿದ್ದರೂ, ಅನಗತ್ಯ ವಿವರಗಳಿಂದ ದಿಕ್ಕು ತಪ್ಪುವ ಸೂಚನೆಗಳೆ ಅಧಿಕ. ಈ ಕ್ರಮ ಅವರು ನಿರ್ವಹಿಸುವ ವಸ್ತುಗಾರಿಕೆಗೆ ಗಂಭೀರತೆ ತರುವುದಿಲ್ಲ. ಕುಟುಂಬದ ಪ್ರಸಂಗಗಳನ್ನು ಬರೀ ವಿವರಿಸುವ ಹಂತಕ್ಕೆ ಬರುತ್ತವೆ. 'ಸಬ್ಸೀಡಿ' ಕಥೆ ತನ್ನ ಆಂತರ್ಯದಲ್ಲಿ ಗಮನಸೆಳೆದರೂ, ಭಾವುಕತೆ ಅಲ್ಲಿ ಕೃತಕತೆಯ ಬೆನ್ನೇರಿದಂತೆ ಕಾಣುತ್ತದೆ. ಮನುಷ್ಯ ತನ್ನ ನಿತ್ಯ ಬದುಕಿನಲ್ಲಿ ಬರೀ ಭಾವುಕತೆಯಲ್ಲೇ ಕಾಲ ಕಳೆಯಲಾರ. 'ಮುಟ್ಟು' ರೀತಿಯ ಕಥೆಗಳು ಕನ್ನಡ ಕಥನದಲ್ಲಿ ಹೆಚ್ಚಾಗಿ ಬಂದಿದ್ದರಿಂದ ಆ ಬಗೆಯ ಆಶಯಗಳಿಂದ ಗುರುಪ್ರಸಾದ್ ತಪ್ಪಿಸಿಕೊಂಡಿದ್ದಾರೆ. 'ಗೋವಿನ ಜಾಡು' ಸದ್ಯದ ಬದುಕಿನ ಬೆತ್ತಲುತನಗಳನ್ನು ಸರಾಗವಾಗಿ, ಮಾರ್ಮಿಕವಾಗಿ ಹಿಡಿದಿದೆ. ಹಲ ಬಗೆಯ ಆಶಯಗಳನ್ನು ಏಕತ್ರಗೊಳಿಸುವ ಇಚ್ಛೆಯಿಂದ ತನ್ನ ಮಿತಿಯಲ್ಲೇ ಕಥೆ ಗೆಲ್ಲುತ್ತದೆ. ಸಮಕಾಲೀನ ವಸ್ತುಗಳನ್ನು ನಿಭಾಯಿಸುವಾಗ ಹುಸಿ ವೈಚಾರಿಕತನ ಮತ್ತು ಘೋಂಗೀತನಗಳಿಂದ ಪಾರಾಗಬೇಕು. ಈ ಕಥೆಯಲ್ಲಿ ಅದು ಕೊಂಚ ಮಟ್ಟಿಗೆ ಸಾಧ್ಯವಾಗಿದೆ. ಒಂದು ಕಡೆ ಭಾಷಣ; ಮತ್ತೊಂದು ಕಡೆ ಹಸಿವು – ಇವೆಲ್ಲವನ್ನು ಮೀರಿದ ಸಹಜ ಬದುಕು ಇಲ್ಲಿನ ಮನುಷ್ಯರನ್ನು ಜೀವಂತವಾಗಿ ಇರಿಸಿದೆ. ಕಥೆ ತನ್ನ ಗರ್ಭದೊಳಗೆ ಉಳಿಸಿಕೊಂಡ ಸರಾಗತೆ ಮತ್ತು ಮುಗ್ಧತೆಯಿಂದಾಗಿ ಬದುಕಿನ ಸಹಜತೆಯನ್ನು ಎಲ್ಲಾ ಸಿದ್ಧಾಂತಗಳನ್ನು ಮೀರಿ ಉಳಿಸಿಕೊಂಡಿದೆ. ನಗರದಲ್ಲಿ ಗೋಚರಿಸುವ ಬಿರುಕು ಬೀಳಿಸುವ ಘಟನೆಗಳಿಗಿಂತ ಗ್ರಾಮದಲ್ಲಿ ನಡೆಯುವ ವಾಸ್ತವ ಘಟನೆಗಳೇ ಮುಂದೆ ಬಂದು ಕಥೆ ತನ್ನ ಶಕ್ತಿಯನ್ನು ತಾಳುತ್ತದೆ. ಇಲ್ಲಿ ಹಾಸ್ಯ ಗ್ರಾಮೀಣ ಭಾಗವೂ ಹೌದು; ಬದುಕಿನ ಅಂಗವೂ ಕೂಡ. ಮೂಡ್ಲಗಿರಿಯ ಊಸು ಗಂಭೀರ ಗದ್ದಲವನ್ನು ತಪ್ಪಿಸುವುದೇ ಇದಕ್ಕೆ ನಿದರ್ಶನ. ದಲಿತ ಬದುಕಿನ ಶಕ್ತಿ ಮತ್ತು ಬಿರುಕುಗೊಳ್ಳುತ್ತಿರುವ ಜಾಡುಗಳನ್ನು ಗುರುಪ್ರಸಾದ್ 'ಚಾಕರಿ', 'ಇವ ನಮ್ಮವ', 'ಬೇರಿಗಂಟಿದ ಮರ', 'ಜಾತಿ ಮಾಂಸ' ಮುಂತಾದ ಕಥೆಗಳಲ್ಲಿ ಶಕ್ತಿಯುತವಾಗಿ ತರಬಲ್ಲ ಕಥೆಗಾರ. 'ಚಾಕರಿ' ಕಥೆಯಲ್ಲಿ ಎಂದೋ ಕೊಟ್ಟ ನೆಲವನ್ನು ಪರಂಪರೆಯ ಶ್ರದ್ಧೆ ಎಂದು ಭಾವಿಸುವ ನರಸಪ್ಪ ಒಂದೆ ಕಡೆ ಜಾತಿಯ ಅವಮಾನವನ್ನು ಒಪ್ಪಿಕೊಂಡರೆ, ಮತ್ತೊಂದು ದಿಕ್ಕಿನಲ್ಲಿ ಆಧುನಿಕ ಶಿಕ್ಷಣವನ್ನು ಪಡೆದಿರುವ ಪ್ರಕಾಶ ಮುಂತಾದವರು ನರಸಪ್ಪನನ್ನು ಬದಲಿಸುವಲ್ಲಿ ವಿಫಲವಾಗುತ್ತಾರೆ. ಇದು ದಲಿತತನದ ಆಂತರಿಕ ಸತ್ಯವೇ ಆಗಿದೆ. 'ಬೇರಿಗಂಟಿದ ಮರ' ಕಥೆ ಹಲವು ದೃಶ್ಯಗಳಿಂದ ಮಹತ್ವ ಪಡೆಯುತ್ತದೆ. ಬದಲುಗೊಂಡ ಪ್ರಾದೇಶಿಕತೆ; ಸಂಘಟನೆಯ ಹೆಸರಿನಲ್ಲಿ ಯುವಕರು ದಿಕ್ಕುತಪ್ಪುವುದು; ಪುರೋಹಿತನ ಅಸೂಯೆ ಬೆರೆತ ಪಿತೂರಿ; ನಿಸರ್ಗಪ್ರಿಯರ ಸೋಲು ಇತ್ಯಾದಿ ವಿಚಾರಗಳು ಇಲ್ಲಿ ಜಾಗ ಪಡೆದಿವೆ. ಕಥೆ ಹಲವು ತಿರುವುಗಳನ್ನು ಧರಿಸಿದ್ದರಿಂದ ಸಹಜ ನಡಿಗೆ ಲಭ್ಯವಾಗಿದೆ. 'ಇವ ನಮ್ಮವ' ಕಥೆ ವರ್ತಮಾನದ ಜಾತಿ ಸತ್ಯಗಳನ್ನು ಮುಕ್ತವಾಗಿ ಹೇಳುತ್ತದೆ. ಇಲ್ಲೆಲ್ಲಾ ಗುರುಪ್ರಸಾದ್ ಮುಖ್ಯವಾಗುವುದು ದಲಿತ ಬದುಕಿನ ಸತ್ಯ ಮತ್ತು ಮುಗ್ಧತೆಯನ್ನು ಶೋಧಿಸುವ ಪರಿಯಲ್ಲಿ. ಶಿಕ್ಷಣ, ಹೋರಾಟ ಮತ್ತು ಸಂಘಟನೆಗಳು ಸದ್ಯ ಪಡೆದುಕೊಳ್ಳುತ್ತಿರುವ ಸ್ವರೂಪಗಳನ್ನು ಕಲಾತ್ಮಕವಾಗಿ ತರುವ ಯತ್ನದಲ್ಲಿ ಗುರುಪ್ರಸಾದ್ ಮಾಗುವ ಹಂತದಲ್ಲಿದ್ದಾರೆ.

